



ಗಂಡ: ನನಗೆ ಅಲ್ಲಾವುದ್ದೀನನ ದೀಪ ಸಿಕ್ಕಿದ ಕಣೇ.

ಹೆಂಡತಿ: ಏನು ಕೇಳಿದಿರಿ?

ಗಂಡ: ನಿನ್ನ ಬುದ್ಧಿಯನ್ನು ಹತ್ತು ಪಟ್ಟು ಹೆಚ್ಚು ಮಾಡುವಂತೆ ಕೇಳಿದೆ.

ಹೆಂಡತಿ: ವಾವ್, ಏನಂತು ಅದು?

ಗಂಡ: ಸೊನ್ನೆಯನ್ನು ಎಷ್ಟು ಸಲ ಗುಣಿಸಿದರೂ ಪ್ರಯೋಜನವಿಲ್ಲ. ಬೇರೇನಾದರೂ ಕೇಳು ಅಂತು!

★★★

ಟೀಚರ್: ಈ ಭೂಮಿಯಲ್ಲಿ ನೀರೇ ಇಲ್ಲದಿದ್ದರೆ ಏನಾಗುತ್ತಿತ್ತು?

ಗುಂಡ: ಬೇರೆ ಯಾವುದೂ ಗೊತ್ತಿಲ್ಲ ಸಾರ್, ಆದ್ರೆ ನಮ್ಮಪ್ಪನ ಹತ್ರ ಬಂಗ್ಲೆ, ಕಾರು ಇರ್ತಿರಲಿಲ್ಲ.

ಟೀಚರ್: ನಿಮ್ಮಪ್ಪ ಏನು ಕೆಲ್ಸ ಮಾಡ್ತಾರೆ?

ಗುಂಡ: ಹಾಲಿನ ಬಿಸಿನೆಸ್!

★★★

ಗೆಳೆಯ: ‘ನಾಯಿ ಇದೆ’ ಅಂತ ಬೋರ್ಡ್ ಹಾಕಿದೆ. ಆದರೂ ಗೇಟ್ ಒಳಗೆ ನುಗ್ತಾರೆ. ಹೊಸ ಐಡಿಯಾ ಏನಾದ್ರೂ ಕೊಡು.

ಗುಂಡ: ನಾಯಿಗಳಿವೆ ಅಂತ ಬೋರ್ಡ್ ಬರೆಸಿ ಹಾಕು.

ಗೆಳೆಯ: ಅದೂ ಆಯ್ತು, ನುಗ್ಗೋದು ಇನ್ನೂ ಹೆಚ್ಚಾಯ್ತು.

ಗುಂಡ: ಈಗ ಉಳಿದಿರೋದು ಒಂದೇ ದಾರಿ. ‘ಮನೆ ತುಂಬಾ ನಾಯಿಗಳಿವೆ’ ಅಂತ ಬೋರ್ಡ್ ಹಾಕೋದು.

(ಸಂಗ್ರಹ) **ಹಾಡ್ಯ ಬ.ಜಯಾನಂದ, ಮೈಸೂರು**

ಹೆಂಡತಿ ಕಾರನ್ನು ಡ್ರೈವ್ ಮಾಡುತ್ತಿದ್ದಳು.

ಗಂಡ: ತಿರುವು ತೆಗೆದುಕೊಳ್ಳುವಾಗ ನೀನು ಇಂಡಿಕೇಟರ್ ಯಾಕೆ ಹಾಕಬಾರದು?

ಹೆಂಡತಿ: ಅದರಿಂದ ಏನಾಗುತ್ತೆ?

ಗಂಡ: ಉಳಿದ ಚಾಲಕರಿಗೆ ನೀನು ಯಾವ ಕಡೆ ಹೋಗ್ತೀಯ ಅಂತ ತಿಳಿಯುತ್ತೆ.

ಹೆಂಡತಿ: ನಾನು ಎಲ್ಲಿಗೆ ಹೋಗ್ತೀನಿ ಅನ್ನೋದನ್ನು ಕಟ್ಕಂಡು ಯಾರಿಗೆ ಏನಾಗ್ಬೇಕಾಗಿಲ್ಲಾ, ತಿಳೀತಾ?

ಗಂಡ: ಸಾರಿ ಕಣೆ, ತಪ್ಪಾಯ್ತು!

★★★

ಹೆಂಡತಿ: ಊಟಕ್ಕೆ ಸಾರು ಮಾಡಲೋ, ಸಾಂಬಾರ್ ಮಾಡಲೋ?

ಗಂಡ: ಮೊದಲು ಏನಾದರೂ ಒಂದು ಮಾಡು ಮಾರಾಯ್ತಿ. ಆಮೇಲೆ ಅದಕ್ಕೆ ಹೆಸರಿಟ್ಟರಾಯ್ತು!

★★★

ಶಾಪಿಂಗಿಗೆ ಹೋಗಿ ಲೇಟಾಗಿ ಮನೆಗೆ ಬಂದ ಹೆಂಡತಿ ತಮ್ಮ ಬೆಡ್‌ರೂಮಿಗೆ ಹೋಗಿ ನೋಡಿದಾಗ ಹಾಸಿಗೆಯಲ್ಲಿ ಇಬ್ಬರು ಹೊದ್ದುಕೊಂಡು ಮಲಗಿರುವುದು ಕಾಣುತ್ತದೆ. ಕೂಡಲೇ ದೊಣ್ಣೆಯೊಂದನ್ನು ತಂದು ಅವರಿಗೆ ಹೊಡೆಯತೊಡಗುತ್ತಾಳೆ. ಹಾಲಿನಲ್ಲಿ ಮಲಗಿದ್ದ ಗಂಡ ಈ ಗಲಾಟೆಗೆ ಎಚ್ಚರಾಗಿ ಬಂದವನು. ‘ಅಯ್ಯೋ ಡಿಯರ್ ಊರಿನಿಂದ ನಿಮ್ಮ ಅಪ್ಪ ಅಮ್ಮ ಬಂದಿದಾರೆ. ನಮ್ಮಲ್ಲಿರೋದು ಒಂದೇ ಬೆಡ್‌ರೂಂ ಅಲ್ವಾ. ಅದಕ್ಕೆ ಅಲ್ಲೇ ಮಲಗಲು ಹೇಳಿದೆ!’ ಎಂದ.

(ಸಂಗ್ರಹ) **ಬಿ.ಎಸ್. ರಾಜಲಕ್ಷ್ಮಿ, ಹಾಸನ**

**ಪ್ರಜಾವಾಣಿ**
**ದೀಪಾವಳಿ ವಿಶೇಷಾಂಕ 2017**

# ಅರಿವಿನ ದೀವಿಗೆ ಕುಡಿ







ಸಮಗ್ರ ಕರ್ನಾಟಕದ ನೋಟ

**ರಾಷ್ಟ್ರೀಯತೆ:** ಎಡ-ಬಲ, ಮಧ್ಯಮ, ಸತ್ಯಪಂಥೀಯ ಯಾವುದು ತಥ್ಯ

**ಆಹಾರ ಸಂಸ್ಕೃತಿ:** ಉಣ್ಣುವ ಬಟ್ಟಲಲ್ಲಿ ರುಚಿ ಅಭಿರುಚಿ ಏನಿರಬೇಕು?

**ಹಸಿರು ತಂತು:** ಬೆರಳ ತುದಿಯಲ್ಲಿ ಎಲ್ಲರ ಬೆಸೆದಿಡುವ ಸಾಮಾಜಿಕ ಜಾಲತಾಣದ ಒಳ ಹೊರಗಿನ ತಲ್ಲಣ

**ಜೀವನಪ್ರೀತಿ:** ನಮ್ಮನ್ನು ಪ್ರೀತಿಸುತ್ತಲೇ ಪ್ರೀತಿಯನ್ನು ಹಂಚುವ ಬಗೆ

**ಸಿನಿಲೋಕ:** ಸಮಾಜಮುಖಿ ಸಿನಿತಾರೆಯರ ಕಥೆ

**ಓದು ಆನಂದಿಸಲು:** ಚೆನ್ನವೀರ ಕಣವಿ, ಪ್ರಸನ್ನ, ಎಸ್.ಜಿ. ಸಿದ್ದರಾಮಯ್ಯ, ಬಿ.ಆರ್. ಲಕ್ಷ್ಮಣರಾವ್, ಎಸ್. ದಿವಾಕರ್, ಶ್ರೀಧರ ಬಳಗಾರ, ಜಯಶ್ರೀ ಕಾಸರವಳ್ಳಿ, ಪ್ರತಿಭಾ ನಂದಕುಮಾರ್, ಜ.ನಾ. ತೇಜಶ್ರೀ, ಕೆ.ವೈ. ನಾರಾಯಣಸ್ವಾಮಿ, ಜಿ.ವಿ. ಆನಂದಮೂರ್ತಿ, ಮಹಾದೇವ ಶಂಕನಪುರ, ಮಂಡ್ಯ ರಮೇಶ್ ಅವರ ಲೇಖನ, ಕಥೆ, ಕವಿತೆ ಜೊತೆಗೆ ವರ್ಷ ಭವಿಷ್ಯ...

**ಕಥೆ- ಕವನ, ಮಕ್ಕಳ ವರ್ಣಚಿತ್ರ ಸ್ಪರ್ಧೆಗಳ ತೀರ್ಪು ಮತ್ತು ಬಹುಮಾನಿತ ಕಥೆ, ಕವನಗಳ ಸೊಗಡು, ವರ್ಣಚಿತ್ರಗಳ ಸೊಬಗು.**